CW.4 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.608/2019

| | |
|---|---|
| ಸಾಕ್ಷಿದಾರರ ಹೆಸರು | ಚಿಕ್ಕತಾಯಮ್ಮ |
| ಗಂಡನ ಹೆಸರು | ಚಿಕ್ಕೀರೇಗೌಡ |
| ವಯಸ್ಸು | 60 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ತಗಡೇಗೌಡನದೊಡ್ಡಿ ಗ್ರಾಮ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 26.03.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ಆರೋಪಿ 1 ರಿಂದ 9 ರವರು ಗೊತ್ತಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ 1 ರಿಂದ 3 ಮತ್ತು 6 ರವರು ಹಾಜರಿದ್ದು, 4, 5, 7 ರಿಂದ 9 ರವರು ಗೈರು ಹಾಜರಿದ್ದು ಅವರನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಚಾಸಾ-1 ನನ್ನ ಮಗ, ಚಾಸಾ-2 ನನ್ನ ಗಂಡ, ಚಾಸಾ-3 ನನ್ನ ಸೊಸೆ, ಚಾಸಾ-5 ಮತ್ತು 6 ರವರು ಗೊತ್ತಿರುವುದಿಲ್ಲ.

ಸುಮಾರು 8 ವರ್ಷದ ಹಿಂದೆ ನಮ್ಮ ಹೊಲದಲ್ಲಿ ಸುಮಾರು 11 ಗಂಟೆ ಸಮಯದಲ್ಲಿ ಆರೋಪಿತರು ಉಳುಮೆ ಮಾಡುತ್ತಿದ್ದರು. ಚಾಸಾ-1 ಮತ್ತು 2 ರವರು ಈ ರೀತಿ ನಮ್ಮ ಜಮೀನಿನಲ್ಲಿ ಯಾಕೆ ಉಳುಮೆ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಅವರುಗಳನ್ನು ದೊಣ್ಣೆಯಲ್ಲಿ ಹೊಡೆದಿರುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ಚಾಸಾ-3 ರವರು ಹೋಗಿ ಕೇಳಿದ್ದಕ್ಕೆ ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಠಾಣೆಗೆ ಹೋಗಿರುತ್ತೇವೆ. ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ 2 ದೊಣ್ಣೆಗಳನ್ನು ತೋರಿಸಿದ್ದ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮ-1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ಗಲಾಟೆಯು ದಿಃ16.07.2018 ರಂದು ಬೆಳಿಗ್ಗೆ 11.30 ಗಂಟೆಗೆ ನಡೆದಿರುತ್ತದೆಂದರೆ ಸರಿ. ಆ ಸಮಯದಲ್ಲಿ ನಾನು ಹಾಗೂ ಚಾಸಾ-1 ರಿಂದ 3 ರವರುಗಳು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ನಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಅದನ್ನು ಕೇಳಲು ಹೋದ ಚಾಸಾ-1 ಮತ್ತು 2 ರವರಿಗೆ ದೊಣ್ಣೆಗಳಿಂದ ಹೊಡೆದರು ಎಂದರೆ ಸರಿ. ಅದೇ ರೀತಿ ಅವರಿಗೆ ಅವಾಚ್ಯ ಶಬ್ದಗಳಿಂದಲೂ ಸಹ ಬೈದಿರುತ್ತಾರೆಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಬಲಭುಜಕ್ಕೆ ಹಾಗೂ ಎಡಗೈಗೆ ಹೊಡೆದಿರುತ್ತಾರೆಂದರೆ ಸರಿ. ಚಾಸಾ-2 ರವರಿಗೆ ಎಡತೊಡೆ ಹಾಗೂ ಮುಖಕ್ಕೆ ಹೊಡೆದಿರುತ್ತಾರೆಂದರೆ ಸರಿ. ಈ ವಿಚಾರಕ್ಕೆ ಸಂಬಂದಿಸಿದಂತೆ ದಿಃ15.08.2018 ರಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ಆರೋಪಿತರ ಹಾಗೂ ನಮ್ಮ ಜಮೀನು ಅಕ್ಕಪಕ್ಕದಲ್ಲಿರುತ್ತದೆಂದರೆ ಸರಿ. ಅವರ ಜಮೀನು ಸರ್ವೆ ನಂ.82 ವಿಸ್ತೀರ್ಣ 3 ಎಕರೆ ಎಂದರೆ ಸರಿ. ನಮ್ಮ ಜಮೀನು ಸರ್ವೆ ನಂ.85/4 ಎಂದರೆ ಸರಿ. ನಮಗೂ

ಅವರಿಗೂ ದಾರಿಯ ಸಂಬಂಧ ವೈಶಾಮ್ಯವಿತ್ತು ಎಂದರೆ ಸರಿ. ನಮ್ಮ ಜಮೀನಿಗೆ ಓಡಾಡಲು ತಗಡೇಗೌಡನದೊಡ್ಡಿಯಿಂದ ನಕಾಶೆ ದಾರಿ ಇರುತ್ತದೆಂದರೆ ಸರಿ. ಆರೊಪಿತರ ಜಮೀನಿನಲ್ಲಿ ಯಾವುದೇ ನಕಾಶೆ ದಾರಿ ಇರುವುದಿಲ್ಲ ಎಂದರೆ ಸರಿ. ಅವರ ಜಮೀನಿನಲ್ಲಿ ನಮ್ಮ ಜಮೀನಿಗೆ ಹೋಗಲು ರಸ್ತೆ ಮಾಡುವ ಪ್ರಯತ್ನದಲ್ಲಿದ್ದೇವು ಎಂದರೆ ಸರಿ. ಆದರೆ ಆರೋಪಿತರು ಅವಕಾಶ ಕೊಡಲಿಲ್ಲ ಎಂದರೆ ಸರಿ. ಆದ್ದರಿಂದ ಆರೋಪಿತರು ದಾರಿ ಬಿಡಲಿಲ್ಲ ಎಂಬ ದ್ವೇಷಕ್ಕೆ ಈ ರೀತಿ ಸುಳ್ಳು ದೂರು ಕೊಟ್ಟರೆ ದಾರಿ ಬಿಡುತ್ತಾರೆಂದು ದೂರು ಕೊಡಲಾಗಿದೆ ಎಂದರೆ ಸಾಕ್ಷಿಯು ದಾರಿ ಸಲುವಾಗಿಯೇ ದೂರನ್ನು ಕೊಟ್ಟಿದ್ದೇವೆಂದು ನುಡಿಯುತ್ತಾರೆ.

ಆರೋಪಿತರು ನಮ್ಮ ಜಮೀನಿನಲ್ಲಿ ಟ್ರಾಕ್ಟರ್ ಮುಖಾಂತರ ಉಳುಮೆ ಮಾಡುತಿದ್ದರು. ಅದರ ಸಂಖ್ಯೆ ಗೊತ್ತಿರುವುದಿಲ್ಲ. ಅದು ಯಾರಿಗೆ ಸೇರಿರುತ್ತದೆಂದು ಗೊತ್ತಿರುವುದಿಲ್ಲ. ಅದರ ಚಾಲಕನ ಹೆಸರು ಸಹ ಗೊತ್ತಿರುವುದಿಲ್ಲ. ಸದರಿ ಟ್ರಾಕ್ಟರ್ ಮಾಲೀಕ ಅಥವಾ ಚಾಲಕನನ್ನು ಸಾಕ್ಷಿಯಾಗಿ ಸೇರಿಸಿರುವುದಿಲ್ಲ. 1ನೇ ಆರೋಪಿ ಚಾಸಾ-1 ರವರ ಭುಜಕ್ಕೆ ಹಾಗೂ ಚಾಸಾ-2 ರವರ ಕಪಾಳಕ್ಕೆ ದೊಣ್ಣೆ ಹಾಗೂ ಚಪ್ಪಲಿಯಲ್ಲಿ ಹೊಡೆದಿರುತ್ತಾರೆ. ಚಪ್ಪಲಿಯನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುವುದಿಲ್ಲ. ಯಾರು ಹೊಡೆದರು ಎಂದು ಅಷ್ಟು ಜನರಲ್ಲಿ ನನಗೆ ಗೊತ್ತಾಗಲಿಲ್ಲ. 2ನೇ ಆರೋಪಿ ಚಾಸಾ-1 ರವರಿಗೆ ಭುಜಕ್ಕೆ ಹೊಡೆದಿರುತ್ತಾರೆ. ನನಗೆ ಜ್ಞಾನ ತಪ್ಪಿ ದ್ದರಿಂದ ನಂತರದಲ್ಲಿ ಏನಾಯಿತು ಎಂದು ಗೊತ್ತಿಲ್ಲ. ಅದೇ ರೀತಿ 3 ರಿಂದ 6 ನೇ ಆರೋಪಿತರು ಇವರುಗಳು ಯಾವ ವಸ್ತುವಿನಿಂದ ಯಾರಿಗೆ ಹೊಡೆದಿರುತ್ತಾರೆಂದು ನೆನಪಿರುವುದಿಲ್ಲ.

ಆರೋಪಿತರು ಎಂದಿಗೂ ಸಹಿತ ನಮ್ಮ ಜಮೀನಿನಲ್ಲಿ ಉಳುಮೆ ಮಾಡಿ ಈ ಸಂಬಂಧ ಕೇಳಿದಾಗ ಚಾಸಾ-1 ಮತ್ತು 2 ರವರಿಗೆ ಹೊಡೆದು ಹಲ್ಲೆ ಮಾಡಿ ನನ್ನ ಹಾಗೂ ಚಾಸಾ-3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೊಣ್ಣೆಗಳು ಯಾವ ಜಾತಿಯದು

ಎಂದು  ಎಷ್ಟು ಉದ್ದ ಹಾಗೂ ದಪ್ಪ ಎಂದು ಗೊತ್ತಿರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಹೊಡೆದಾಗ ರಕ್ತಕಲೆ ಆಗಿರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹಿತ ವಿನಾಕಾರಣ ಕೇವಲ ದಾರಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**